

ರಾಮೇಗೌಡ, 'ನಾನು ಬೆಚ್ಚಿದ್ದು ಯಾಕೆ ಗೊತ್ತ? ನಿನ್ ಮಾತು ಕೇಳ್ತಾ ಕೇಳ್ತಾ ನನ್ನ ಕತೆಗಳೂ ಇದೇ ಥರ ನನ್ನ ಮೇಲೆ ಸೇಡು ತೀರಿಸಿಕೊಂತಾ ಇವೆಯೇನೋ ಅನ್ನೋಕೆ ಶುರುವಾಗಿದೆ' ಎಂದು ಅಳುಮುಖ ಮಾಡಿಕೊಂಡು ಸುಮ್ಮನಾದ. ಜೋಸೆಫ್‌ಗೆ ಮೈ ಉರಿಯತೊಡಗಿತು. 'ಸ್ಟುಪಿಡ್ ಫೆಲೋ! ನಾನೊಂದು ವಿಚಿತ್ರ ಸಂಕಟ ಹೇಳಿಕೊಂತಾ ಇದ್ದರೆ ನಿನಗೆ ತಮಾಷೆ' ಎಂದು ರೇಗಿದ. ರಾಮೇಗೌಡ, 'ನೀನು ಏನಾದರೂ ಅಂದುಕೋ. ನಾನು ನಿನ್ನಷ್ಟು ದೊಡ್ಡ ಕತೆಗಾರ ಅಲ್ಲ ಅನ್ನೋದು ನಿಜ. ನೀನು ನಿನ್ನ ಕತೆಯಿಂದ ಪಟ್ಟ ಕಷ್ಟ ಹೇಳ್ತಾ ಇರುವಾಗ ನನ್ನ ಸಾಧಾರಣ ಕತೆಗಳಿಂದಲೂ ನಾನು ತುಂಬ ಪಡಿಪಾಟಲು ಪಟ್ಟಿದೀನಿ ಅನ್ನೋದು ನೆನಪಾಗ್ತಿರೋದೂ ನಿಜ' ಎನ್ನುತ್ತಿದ್ದ ರಾಮೇಗೌಡ ಗಂಟಲಲ್ಲಿ ಒತ್ತರಿಸುತ್ತಿರುವ ಅಳುವನ್ನು ನುಂಗಿಕೊಳ್ಳುತ್ತಿರುವವನಂತೆ ಕಂಡ.

ಚಣ ಬಿಟ್ಟು, 'ಹಿಂದೆ ಯಾವಾಗಲೋ ನಾನೊಂದು ಕತೆ ಬರೆದಿದ್ದೆ. ಅದರಲ್ಲಿ ಡೈವೋರ್ಸಿಗೆ ಅಪ್ಲೈ ಮಾಡಿದ್ದ ಗಂಡ–ಹೆಂಡತಿ ಕೋರ್ಟಿನಲ್ಲಿ' ಎಂದು ರಾಮೇಗೌಡ ಶುರು ಮಾಡುತ್ತಿದ್ದಂತೆ, ನಡುವೆ ಬಾಯಿ ಹಾಕಿದ ಜೋಸೆಫ್, 'ಓದಿದೀನಿ ಬಿಡಲೇ! ಆ ಕತೇಲಿ ಕೊನೆಗೆ ಜಡ್ಜು ಓಪನ್ ಕೋರ್ಟಲ್ಲೇ ತೀರಾ ಎಮೋಷನಲ್ ಆಗ್ತಾನೆ. 'ನೀವಿಬ್ರೂ ಹದಿನೈದು ವರ್ಷದಿಂದ ಒಟ್ಟಿಗೇ ಬದುಕಿದೀರ; ಆರತಿಗೊಬ್ಬ ಮಗಳು; ಕೀರುತಿಗೊಬ್ಬ ಮಗ ಅಂತ ಇಬ್ಬರು ಮುದ್ದಾದ ಮಕ್ಕಳಿದಾರೆ. ನಾನು ಈ ಡೈವೋರ್ಸ್ ತೀರ್ಪಿಗೆ ಸೈನ್ ಹಾಕಲ್ಲ' ಅಂತ ಕಣ್ಣೊರಸಿಕೊಳ್ತಾನೆ. ಕೊನೆಗೆ ಆ ಗಂಡ ಹೆಂಡ್ತಿ ಇಬ್ಬರೂ ಅಳುತ್ತಾ ಕೋರ್ಟಲ್ಲಿ ಅಪ್ಪಿಕೊಳ್ತಾರೆ' ಎಂದು ಸಿನಿಕ ನಗೆ ನಕ್ಕು ಸುಮ್ಮನಾದ.

'ಅದೇ ಕತೆ! ಇನ್ನೂ ನೆನಪಿಟ್ಟುಕೊಂಡಿದೀಯ' ಎಂದು ರಾಮೇಗೌಡ ಒಂಥರಾ ವಿಷಾದ ಭಾವದಿಂದ ಜೋಸೆಫ್ ಮುಖವನ್ನೇ ನೋಡಿದ.

'ಹೂಂ! 'ಹ್ಯಾಪಿ ಎಂಡಿಂಗ್! ಕತೆಯ ಎಂಡಿಂಗ್ ಸ್ವಲ್ಪ ಆರ್ಟಿಫಿಶಿಯಲ್ಲಾಗಿದೆ ಸುಖಾಂತ ಮಾಡಬೇಕು ಅಂತಲೇ ಈ ತಿರುವನ್ನು ಹೇರಿದಂತಿದೆ' ಅಂತ ಆಗ ನಾನೇ ರಿಯಾಕ್ಟ್ ಮಾಡಿದ್ದನಲ್ಲ' ಎಂದ ಜೋಸೆಫ್ ಇದ್ದಕ್ಕಿದ್ದಂತೆ ಅಲ್ಲಿಗೇ ನಿಲ್ಲಿಸಿ ಏನೋ ತಪ್ಪು ಮಾಡಿದವನಂತೆ ಅಳುಕಿ ರಾಮೇಗೌಡನ ಮುಖ ನೋಡುವುದನ್ನು ತಪ್ಪಿಸಿಕೊಳ್ಳುತ್ತಾ ಮುಖ ವಾರೆ ಮಾಡಿಕೊಂಡ. ಚಣ ಬಿಟ್ಟು ನಿಧಾನಕ್ಕೆ ಹೇಳಿದ: 'ಅವತ್ತು ನಿನ್ನ ಕತೆಯ ಎಂಡಿಂಗ್ ಬಗ್ಗೆ ನಾನು ಹೇಳಿದ್ದು ತಪ್ಪು ಅಂತ ಸಲ್ಮಾನ್ ರಶ್ದಿಯ ಅನುಭವ ಓದಿದ ಮೇಲೆ ಗೊತ್ತಾಯ್ತು. ರಶ್ದಿ 'ಸಟಾನಿಕ್ ವರ್ಸಸ್' ಕಾದಂಬರಿ ಬರೆದಾಗ ಇರಾನಿನ ಸರ್ವಾಧಿಕಾರಿ ಅಯಾತುಲ್ಲಾ ಖೊಮೇನಿ ಅವನ ತಲೆ ತೆಗೀಬೇಕು ಅಂತ ಫತ್ವಾ ಹೊರಡಿಸಿದ್ದು, ರಶ್ದಿ ಅಂಡರ್ ಗ್ರೌಂಡ್ ಆಗಿದ್ದು ಅದೆಲ್ಲಾ ಗೊತ್ತಲ್ಲ? ಆ ಕಾಲದಲ್ಲಿ ಅಪರೂಪಕ್ಕೆ ರಶ್ದಿಗೆ ಮಗನ ಜೊತೆ ಇರೋಕೆ ತುಂಬಾ ಟೈಮ್ ಸಿಕ್ತು. ಆಗ ಮಗನಿಗೇಂತ ಒಂದಿಷ್ಟು ಕತೆ ಬರೀತಾ ಬರೀತಾ ರಶ್ದಿಗೆ ಇದ್ದಕ್ಕಿದ್ದಂತೆ ಆ ಕತೆಗಳಿಗೆಲ್ಲ ಹ್ಯಾಪಿ ಎಂಡಿಂಗ್ ಕೊಡಬೇಕು ಅನ್ನಸ್ತಂತೆ. ಆಗ ರಶ್ದಿ ಬ್ರಿಟಿಷ್ ಪೊಲೀಸ್ ರಕ್ಷಣೆಯಲ್ಲಿದ್ದನಲ್ಲಾ; ತನ್ನ ಕಷ್ಟಗಳಿಗೂ ಒಂದಲ್ಲ ಒಂದು ದಿನ ಹ್ಯಾಪಿ ಎಂಡಿಂಗ್ ಸಿಗಬಹುದು ಅಂತ ಅವನು ಕಾಯ್ತಾ ಇದ್ದಾಗ ಈ ಕತೆಗಳಿಗೂ ಹ್ಯಾಪಿ ಎಂಡಿಂಗ್ ಕೊಡಬೇಕು ಅನ್ನಿಸ್ತೇನೋ ಪಾಪ. ಒಂದು ಕತೆಗೆ ಹ್ಯಾಪಿ ಎಂಡಿಂಗ್ ಕೊಡೋಕೆ ಎಂಥೆಂಥ ಒತ್ತಡ ಇರುತ್ತೆ ನೋಡು ಅದನ್ನೆಲ್ಲ ನೋಡದೆ, ಟ್ರ್ಯಾಜಿಕ್ ಎಂಡಿಂಗ್ ಪರಿಣಾಮಕಾರಿ ಅಂತ ಕತೇನ ಟ್ರ್ಯಾಜಿಕ್ ಆಗಿ ಮುಗಿಸೋದು, ಹ್ಯಾಪಿ ಎಂಡಿಂಗ್ ಅಂದ ತಕ್ಷಣ ಮೂಗು ಮುರಿಯೋದು. ಇವೆಲ್ಲ ಎಷ್ಟು ಮೆಕ್ಯಾನಿಕಲ್ ಆಗಿರುತ್ತೆ'

'ಅಯ್ಯೋ! ಅವತ್ತು ನನ್ನ ಕತೆ ಎಂಡಿಂಗ್ ಆರ್ಟಿಫಿಶಿಯಲ್ ಅಂತ ನೀನು ಹೇಳಿದ್ದು ಸರಿಯಾಗೇ ಇತ್ತು ವಿಚಿತ್ರ ಅಂದರೆ ಈ ಕತೆ ಬರೆದ ಒಂದೇ ತಿಂಗಳಲ್ಲಿ ನನ್ ಸುತ್ತಾಮುತ್ತಾನೇ ಮೂರು ಡೈವೋರ್ಸ್ ಕೇಸ್ ಆದವು. ಅವರೆಲ್ಲಾ ಹೈ ಸೊಸೈಟೀ ಜನ. ಅವರು ನನ್ನ ಕತೇ ಓದಿರೋ ಛಾನ್ಸಿಲ್ಲ, ಅದಿರಲಿ. ತೀರಾ ಶಾಕಿಂಗ್ ಅಂದ್ರೆ ಆ ಕತೆ ಬರೆದ ಸರಿಸುಮಾರಿನಲ್ಲಿ ಡೈವೋರ್ಸಿಗೆ ಅಪ್ಲೈ ಮಾಡಿ ವಾಪಸ್ ತವರುಮನೆಗೆ ಬಂದವರಲ್ಲಿ ನನ್ನ ಇಬ್ಬರು ಅಕ್ಕಂದಿರೂ ಸೇರಿದ್ದರು. ಗೊತ್ತಲ್ಲ, ನಮ್ಮದು ಜಾಯಿಂಟ್ ಫ್ಯಾಮಿಲಿ. ನನ್ನ ಇಬ್ಬರೂ ಅಕ್ಕಂದಿರು ಏಕಾಏಕಿ ನಮ್ಮ ಮನೇಲಿ ಬಂದು ಆರಾಮಾಗಿ ಸೆಟ್ಲಾಗಿದ್ದನ್ನು ಕಂಡೋ ಏನೋ, 'ಈ ಶನಿಗಳಿಬ್ಬರೂ ಮನೆ ಬಿಟ್ಟು ಹೋಗೋ ತನಕ ಈ ಮನೆಗೆ ಕಾಲಿಡಲ್ಲ' ಅಂತ ನನ್ನ ಹೆಂಡ್ತಿ ತಲೆಕೂದಲು ಕಿತ್ತುಕೊಂಡು ಕಿರುಚಾಡಿ ಅಪ್ಪನ ಮನೆ ಸೇರಿ ಒಂದು ವರ್ಷ ಆಯ್ತು ಅವಳು ವಾಪಸ್ ಬರ್ತಾಳೋ ಇಲ್ಲವೋ ಅದೂ ಗೊತ್ತಿಲ್ಲ' ಎನ್ನುತ್ತಾ ರಾಮೇಗೌಡ ಇನ್ನು ಹೇಳುವುದು ಏನೂ ಉಳಿದಿಲ್ಲವೆಂಬಂತೆ ದುಗುಡದಿಂದ ತಲೆ ಕೊಡವಿಕೊಂಡು ಸುಮ್ಮನಾದ.

ಅದುವರೆಗೂ ಇವರಿಬ್ಬರೂ ಮಾತಾಡುತ್ತಿದ್ದನ್ನು ಸುಮ್ಮನೆ ಕೇಳಿಸಿಕೊಳ್ಳುತ್ತಾ, ಆಗಲೋ ಈಗಲೋ ಒಂದು ಮಾತಿನಲ್ಲೋ, ಒಂದು ತಲೆದೂಗಿನಲ್ಲೋ ಹೇಳಬೇಕಾದ್ದನ್ನು ಹೇಳಲೆತ್ನಿಸುತ್ತಿದ್ದ ಹಮೀದು, 'ಹಂಗಾರೆ ಕತೆ ಬರೆಯೋದೇ ಒಂತರಾ ಡೇಂಜರ್ ಅಂತೀರಾ! ಕಣ್ಣೆದುರಿಗೆ ಕಾಣ್ತಾ ಇರೋದನ್ನ ಬರೆಯೋದೋ? ಕಲ್ಪಿಸಿಕೊಂಡು ಬರೆಯೋದೋ?' ಎಂದು ರಾಗ ಎಳೆಯುತ್ತಾ ಮುಖ ಇಳಿಬಿಟ್ಟು ಸುಮ್ಮನಾದ.

ಇನ್ನೂ ಮೂರೋ ನಾಲ್ಕೋ ಕತೆ ಬರೆದಿದ್ದ ಎಳೆಯ ಕತೆಗಾರ ಹಮೀದುವಿಗೆ ಹೋಲಿಸಿದರೆ, ಅವನಿಗಿಂತ ಒಂಚೂರು ಹಿರಿಯರಾಗಿದ್ದ ಇಬ್ಬರು ಕತೆಗಾರರೂ ಮಾತು ಹೊರಡದೆ ಎಷ್ಟೋ ಹೊತ್ತು ಸುಮ್ಮನೆ ಕೂತಿದ್ದರು. ಹಮೀದು ಕೇಳುತ್ತಿರುವ 'ಕಣ್ಣೆದುರಿಗೆ ಕಾಣ್ತಾ ಇರೋದನ್ನ ಬರೆಯೋದೋ? ಕಲ್ಪಿಸಿಕೊಂಡು ಬರೆಯೋದೋ' ಎಂಬ ಪ್ರಶ್ನೆಗೆ ಏನು ಹೇಳಬಹುದು ಎಂದು ಯೋಚಿಸುತ್ತಿದ್ದ ಜೋಸೆಫ್, 'ಕಾಣ್ತಾ ಇರೋದು ಅಂತ ನಾವು ಏನು ಅಂದ್ಕಂಡಿದೀವೋ ಅದನ್ನೇ ಮತ್ತೆ ಮತ್ತೆ ಪ್ರಶ್ನೆ ಮಾಡಿಕೋಬೇಕೇನೋ' ಅಂದ.

'ಇದೂ ಕೂಡ ಕತೆ ಬರೆಯೋರ ಹಳೇ ಸೋಮಾರಿ ಪ್ರಶ್ನೆ' ಎಂದು ರೇಗಿದ ರಾಮೇಗೌಡ, 'ಸಾಧ್ಯವಾದಷ್ಟೂ ಅಪ್ರಾಮಾಣಿಕವಾಗಿ ಬರೀಬಾರದು' ಎಂದು ಗೊಣಗುತ್ತಾ, 'ಆಗ 'ಪ್ರಾಮಾಣಿಕ'ವಾಗಿ ಬರೆಯೋದೂ ಅಂದರೇನು ಅಂತ ಡಿಫೈನ್ ಮಾಡ್ಕೋಬೇಕಾಗುತ್ತೆ, ಥತ್! ಏನೂ ಗೊತ್ತಾಗ್ತಿಲ್ಲ' ಎಂದು ತಲೆ ಕೊಡವಿದ.

'ಅದೇನೇ ಇರಲಿ. ನಾವು ಬರೆದ ಕತೆಗಳು ನಮ್ಮ ಮೇಲೇ ಸೇಡು ತೀರಿಸ್ಕೊಂತವೆ ಅಂತ ನನ್ನ ಥರಾ ನಿನಗೂ ಅನ್ನಿಸ್ತಿರೋದು ನೋಡಿದ್ರೆ ಇಷ್ಟೂ ತುಂಬಾ ಸೀರಿಯಸ್ ಅನ್ನಿಸ್ತಿದೆ' ಎಂದು ಗೊಣಗಿದ ಜೋಸೆಫ್ ಕೊಂಚ ಸಂದಿಗ್ಧದಲ್ಲೇ ಮಾತಾಡತೊಡಗಿದ. 'ನಾವು ಬರೆಯೋ ಕತೆಗಳಲ್ಲಿ ನಮ್ಮ ರಿಲೀಫಿಗಾಗಿ ಕೂಡ ಆಳದ ಭಯ ತೋಡಿಕೊಳ್ತೀವಲ್ಲ, ಕೊನೆಗೆ ಆ ಭಯ ನಿಜವೇ ಆಗಿಬಿಟ್ಟರೆ ನಮಗೆ ಶಾಕ್ ಆಗುತ್ತೇನೋ' ಎಂದು ನಿಲ್ಲಿಸಿದ ಜೋಸೆಫ್, ರಾಮೇಗೌಡನ ಮುಖ ನೋಡುತ್ತಾ ಹೇಳಿದ: 'ಅದರಲ್ಲೂ ನಿನಗೆ ಆದ ಹಾಗೆ ನಾವು ಬರೆಯೋ ಕತೆಯಲ್ಲಿರುವ ಆಶಾವಾದಕ್ಕೆ ಪೂರಾ ವಿರುದ್ಧವಾದ ಕಟು ವಾಸ್ತವ ನಮ್ಮ ಲೈಫಲ್ಲೇ ಎದ್ದು ಬಂದು ನಮ್ಮ ಕಪಾಳಕ್ಕೇ ಹೊಡೆದರೆ ಅದು ಇನ್ನೂ ಶಾಕಿಂಗ್ ಆಗಿರಬಹುದು'

ರಾತ್ರಿ ಬರೆದ ಕತೆಯನ್ನು ರಾತ್ರಿಯೇ ಫೇಸ್‌ಬುಕ್ಕಿಗೆ ಹಾಕಿ, ನಡುರಾತ್ರಿ ಎದ್ದು ಗೆಳೆಯ ಗೆಳತಿಯರ ಅಭಿಪ್ರಾಯಕ್ಕಾಗಿ ಪತರುಗುಟ್ಟುತ್ತಾ ಗಳಿಗೆಗಳಿಗೂ ಸರಸರ ಮೊಬೈಲ್ ಸ್ಕ್ರೀನ್ ಸ್ವೈಪ್ ಮಾಡಿ ನೋಡುವ ಹೊಸ ಕತೆಗಾರ ಹಮೀದು ಕತೆ ಬರೆಯುವುದು ಇಷ್ಟೊಂದು ಗಂಭೀರವಾದ ಕೆಲಸವೇ ಎಂದು ಬೆಚ್ಚಿ ಹಿರಿಯ ಕತೆಗಾರರಿಬ್ಬರ ಮುಖವನ್ನೇ ನೋಡತೊಡಗಿದ. ಅಷ್ಟೊತ್ತಿಗಾಗಲೇ ಪೂರ್ಣ ಆವರಿಸಿದ್ದ ಕತ್ತಲಲ್ಲಿ ಒಬ್ಬರ ಮುಖದ ಮೇಲಿನ ಭಾವ ಮತ್ತೊಬ್ಬರಿಗೆ ಸರಿಯಾಗಿ ಕಾಣುತ್ತಿರಲಿಲ್ಲ.

ಆ ಕಾರ್ಗತ್ತಲಿನಲ್ಲಿ ಹಿರಿಯ ಕತೆಗಾರ, ಹೊಸ ಕತೆಗಾರ ಮುಂತಾದ ಸಣ್ಣಪುಟ್ಟ ಶ್ರೇಣಿಗಳು ತಾತ್ಕಾಲಿಕವಾಗಿಯಾದರೂ ಹಿನ್ನೆಲೆಗೆ ಸರಿದು ಆ ಮೂವರೂ ಕತೆ ಬರೆಯುವ ಕಸುಬನ್ನು ಮತ್ತೆ ಹೊಸದಾಗಿ ಕಲಿಯಲು ಹೊರಟವರಂತೆ ಮೇಲೆದ್ದರು. ■